1	2	3
3	ಕೋಲಾರ	2 ಪ್ರಕರಣಗಳು
4	ಗುಲ್ಬರ್ಗಾ	2 ಪ್ರಕರಣಗಳು
5	ಹಾಸನ	4 ಪ್ರಕರಣಗಳು
6	ಬಿಜಾಪುರ	7 ಪ್ರಕರಣಗಳು
7	ರಾಯಚೂರು	2 ಪ್ರಕರಣಗಳು
8	ಚಿಕ್ಕಮಗಳೂರು	1 ಪ್ರಕರಣ
9	ದಕ್ಷಿಣ ಕನ್ನಡ ಜಿಲ್ಲೆ (ಬಂಟ್ವಾಳ)	1 ಪ್ರಕರಣ
10	ಹಾವೇರಿ	1 ಪ್ರಕರಣ
11	ಬೀದರ್	8 ಪ್ರಕರಣಗಳು
12	ಕಾರವಾರ	2 ಪ್ರಕರಣಗಳು
13	ಚಿತ್ರದುರ್ಗ	4 ಪ್ರಕರಣಗಳು
14	ಮಂಡ್ಯ	10 ಪ್ರಕರಣಗಳು
15	ಬಾಗಲಕೋಟೆ	1 ಪ್ರಕರಣ
16	ಚಾಮರಾಜನಗರ	1 ಪ್ರಕರಣ
17	ಬೆಂಗಳೂರು ನಗರ	2 ಪ್ರಕರಣಗಳು

ಆ) ಹಿಂಪಡೆಯಲು ಕೋರಿಕೆ ಸಲ್ಲಿಸಿದ ಪ್ರಸ್ತಾವನೆಗಳಲ್ಲಿ ಈಗಾಗಲೇ ಕೆಲವು ಪ್ರಕರಣಗಳನ್ನು ಹಿಂಪಡೆಯಲಾಗಿರುತ್ತದೆ ಉಳಿದ ಪ್ರಕರಣಗಳ ಬಗ್ಗೆ ಪರಿಶೀಲಿಸಿ ಕ್ರಮ ಕೈಗೊಳ್ಳಲಾಗುತ್ತದೆ

ಇ) ಪರಿಶೀಲಿಸಿ ತ್ವರಿತವಾಗಿ ಕ್ರಮ ಕೈಗೊಳ್ಳಲಾಗುತ್ತಿದೆ

927 (1023) ಶ್ರೀ ಪದ್ಮನಾಭ ಕೊಟ್ಟಾರಿ ಕೆ (ವಿಟ್ಲ) ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಬಂಟ್ವಾಳದ ಬಿ ಸಿ ರೋಡ್‌ನಲ್ಲಿ ಬಸ್ ನಿಲ್ದಾಣ ನಿರ್ಮಾಣ ಮಾಡುವ ಪ್ರಸ್ತಾವನೆಯು ಈಗ ಯಾವ ಹಂತದಲ್ಲಿದೆ,

ಆ) ಈ ಪ್ರದೇಶದಲ್ಲಿ ಬಸ್ ನಿಲ್ದಾಣದ ಅತ್ಯಗತ್ಯತೆಯಿರುವುದರಿಂದ ಕೂಡಲೇ ಪ್ರಾರಂಭಿಸಲು ಕ್ರಮ ಕೈಗೊಳ್ಳಲಾಗುವುದೇ,

ಇ) ಬಿ ಸಿ ರೋಡ್ ಪ್ರದೇಶದಲ್ಲಿ ಕೆ ಎನ್ ಆರ್ ಟಿ ಸಿ ಬಸ್ ಡಿಪೋ ಪ್ರಾರಂಭಿಸಲು ಸರ್ಕಾರ ಪರಿಶೀಲನೆ ನಡೆಸಿದೆಯೇ,

ಈ) ಹಾಗಿದ್ದಲ್ಲಿ, ಯಾವಾಗ ಪ್ರಾರಂಭಿಸಲಾಗುವುದು?

ಶ್ರೀ ಎನ್ ಚಲುವರಾಯಸ್ವಾಮಿ (ಸಾರಿಗೆ ಸಚಿವರು)

ಅ) ಪರಿಶೀಲನಾ ಹಂತದಲ್ಲಿದೆ

ಆ) ನಿವೇಶನ ಪಡೆದ ನಂತರ ಪರಿಶೀಲಿಸಲಾಗುವುದು

ಇ) ಪರಿಶೀಲನಾ ಹಂತದಲ್ಲಿದೆ

ಈ) ಪರಿಶೀಲನೆಯ ನಂತರ ಮುಂದಿನ ಕ್ರಮ ಜರುಗಿಸಲಾಗುವುದು

928 (1024) ಶ್ರೀ ವದ್ಮನಾಭ ಕೊಟ್ಟಾರಿ ಕೆ (ವಿಟ್ಲ) ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ,

ಅ) ದಕ್ಷಿಣ ಕನ್ನಡ ಜಿಲ್ಲೆಯ ವಿಟ್ಲ ಕ್ಷೇತ್ರ ವ್ಯಾಪ್ತಿಯಲ್ಲಿ ಹಲವು ವರ್ಷಗಳಿಂದ ಸಂಚರಿಸುತ್ತಿದ್ದ ಗ್ರಾಮೀಣ ಸಾರಿಗೆ ಸೇವೆಯನ್ನು ನಿಲ್ಲಿಸಲು ಕಾರಣಗಳೇನು,

ಆ) ಜನಸಾಮಾನ್ಯರಿಗೆ ಹಾಗೂ ವಿದ್ಯಾರ್ಥಿಗಳಿಗೆ ಅನಾನುಕೂಲ ವಾಗಿರುವುದರಿಂದ ಕೂಡಲೇ ಗ್ರಾಮೀಣ ಸಾರಿಗೆ ವ್ಯವಸ್ಥೆಯನ್ನು ಪುನಃ ಪ್ರಾರಂಭಿಸಲಾಗುವುದೆ,

ಇ) ಗ್ರಾಮಗಳು ಹೆಚ್ಚಾಗಿ ಇರುವ ವಿಟ್ಲ ಪ್ರದೇಶ ಜನಸಾಮಾನ್ಯರಿಗೆ ಸಾರಿಗೆ ಸೇವೆಯನ್ನು ಒದಗಿಸಲು ಸಕಾಲಿಕ ಕ್ರಮಗಳೇನು?

ಶ್ರೀ ಎನ್ ಚಲುವರಾಯಸ್ವಾಮಿ (ಸಾರಿಗೆ ಸಚಿವರು)

ಅ) ವಿಟ್ಲ ಕ್ಷೇತ್ರ ವ್ಯಾಪ್ತಿಯಲ್ಲಿ (1) ಬಿ ಸಿ ರೋಡ್‌ನಿಂದ ಸಾಲೆತ್ತೂರು ಹಾಗೂ (2) ವಿಟ್ಲದಿಂದ ಅನಂತಾಡಿ, ಮಾಣಿ ಮುಖೇನ ಉಪ್ಪಿನಂಗಡಿ ಮಾರ್ಗಗಳಲ್ಲಿ ಪ್ರಾಯೋಗಿಕವಾಗಿ ಸಾರಿಗೆ ಸೌಲಭ್ಯವನ್ನು ಸೆಪ್ಟೆಂಬರ್–2006ರಲ್ಲಿ ಪ್ರಾರಂಭಿಸಲಾಯಿತು ಈ ಸಾರಿಗೆಗಳ ಆದಾಯವು ಉತ್ತೇಜಿತವಾಗಿರಲಿಲ್ಲ ಆದುದರಿಂದ, ನಷ್ಟವನ್ನು ತಡೆಗಟ್ಟುವ ನಲುವಾಗಿ ಸದರಿ ಸಾರಿಗೆಗಳನ್ನು ಜನವರಿ–2007ರಲ್ಲಿ ರದ್ದುಗೊಳಿಸಲಾಯಿತು

ಆ) ವಿದ್ಯಾರ್ಥಿಗಳ ಹಾಗೂ ಸಾರ್ವಜನಿಕ ಪ್ರಯಾಣಿಕರ ಅನುಕೂಲಕ್ಕಾಗಿ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮವು ಗ್ರಾಮಾಂತರ ಪ್ರದೇಶಗಳಲ್ಲಿ ಕನಿಷ್ಠ ಪ್ರಮಾಣ ಸಾರಿಗೆ ಸೌಲಭ್ಯವನ್ನು ಪ್ರಸ್ತುತ ಒದಗಿಸುತ್ತಿದೆ ಸಾರಿಗೆ ಆದಾಯದ ಕೊರತೆಯಿಂದಾಗಿ ರದ್ದುಗೊಳಿಸಲಾಗಿರುವ ಸಾರಿಗೆಗಳನ್ನು ಮನಃ ಪ್ರಾರಂಭಿಸುವುದು ನಿಗಮದ ಹಿತದೃಷ್ಟಿಯಿಂದ ಸಮಂಜಸವೆನಿಸುವುದಿಲ್ಲ